ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156

(ನ್ಯಾಕ್‌ಮಾನ್ಯತೆ ಬಿ+ ಗ್ರೇಡ್-2021) ಪಿಎಂ-ಉಷಾ (ಮೇರು)

KITTURU RANI CHANNAMMA UNIVERSITY

(Formerly known as 'Rani Channamma University, Belagavi')

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-UShA (MERU)

E-mail: registrar@rcub.ac.in
cdc@rcub.ac.in

ಕುಲಸಚಿವರ ಕಾರ್ಯಾಲಯ
Office of the Registrar

Website: www.rcub.ac.in
Phone No.: 0831-2565234/08

ಸಂ: ಕಿರಾಚವಿ/ಬೆಳಗಾವಿ/ಕುಸಕಾ/ಸಿಡಿಸಿ/2026-27/ ದಿನಾಂಕ:

2027-28 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಸಂಬಂಧಿಸಿದ ಮಾರ್ಗಸೂಚಿಗಳು

ಕ್ರ. ಸಂ	ವಿವರಣೆ	ದಿನಾಂಕ
1	UUCMS ಪೋರ್ಟಲ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವ ಅವಧಿ (ದಂಡ ರಹಿತ)	**26-10-2026 ರಿಂದ 15-11-2026**
2	UUCMS ಪೋರ್ಟಲ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವ ಅವಧಿ (ರೂ.10,000/- ದಂಡ ಶುಲ್ಕದೊಂದಿಗೆ)	**16.11.2026 ರಿಂದ 21.11.2026**
3	UUCMS ಪೋರ್ಟಲ್‌ನಲ್ಲಿ ನಮೂದಿಸಿದ ಎಲ್ಲಾ ಮಾಹಿತಿಯನ್ನು ಡೌನ್‌ಲೋಡ್ ಮಾಡಿ 2 ಪ್ರತಿಗಳನ್ನು ಸಂಬಂಧಪಟ್ಟ ಎಲ್ಲ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು	**23.11.2026**
4	ಸ್ಥಳೀಯ ವಿಚಾರಣಾ ಸಮಿತಿಯು (LIC) ಮಹಾವಿದ್ಯಾಲಯಗಳಿಗೆ ಭೇಟಿ ನೀಡುವ ಅವಧಿ	**28-11-2026 ರಿಂದ 04-12-2026**
ವಿಶೇಷ ಸೂಚನೆ: ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸುವ ಸಂಯೋಜನಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.		

I. ಹೊಸ ಮಹಾವಿದ್ಯಾಲಯ:

ಸಂಘ ಸಂಸ್ಥೆಗಳು ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಕಡ್ಡಾಯವಾಗಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಅರ್ಜಿ ಸಲ್ಲಿಸುವುದು.

1. ಅರ್ಜಿ ಸಲ್ಲಿಸುವ ಎಲ್ಲಾ ಮಹಾವಿದ್ಯಾಲಯಗಳು ಸರ್ಕಾರವು UUCMS Portalನಲ್ಲಿ ನಿಗದಿಪಡಿಸಿರುವ ಈ ಕೆಳಕಂಡ ಮಾನದಂಡಗಳನ್ನು ಪೂರ್ಣಗೊಳಿಸುವುದು ಕಡ್ಡಾಯವಾಗಿರುತ್ತದೆ.

Slo No.	Parameter	Minimum Value or Quantity Required
1	Land Available (Including Built-up Area), in acre (Own or Lease for 30 Year)	Not Less than **0.5** acres if it is located in mega cities
		1 Acre if it is located in BMRDA, City Corporations and District head quarters
		1.5 acres if it is located in Municipalities or taluka head quarters
		3 acres if it is located in any other rural areas
2	Class Room Area per Student (in square feet)	15 square feet/ student
3	Laboratory Area per Student, (in square feet)	20 square feet/ student
4	Library Area per Student (in square feet)	15 square feet/ student
5	Book Bank for SC/ST Students	Should be Available
6	Sufficient Number of Books, as per UGS Guidelines	At least 1000 books/ 100 books in different titles on each subject, whichever is more

7	Corpus Fund, as per UGC Regulations	Should be Maintained
8	Execution of bond as per UGC Regulations	Should be Executed
9	Building Safety Certificate	Mandatory
10	Fire Safety Certificate	Mandatory

2. **ಜಮೀನು:** ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ : ಇಡಿ 384 ಯುಎನ್ಇ 2020 ದಿನಾಂಕ: 18/02/2022 ರನ್ವಯ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿನ ಹೊಸ ಕಾಲೇಜುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳು ಹಾಗೂ ಹೊಸ ಮಹಾವಿದ್ಯಾಲಯ ಸ್ಥಾಪಿಸಲು ತಮ್ಮ ಜಮೀನಿನ ಕುರಿತು ಕೆಳಗಿನಂತೆ ಮಾನದಂಡಗಳನ್ನು ಅನುಸರಿಸಲು ಸೂಚಿಸಿದೆ.

   - Not less than 0.5 acres if it is located in the mega cities.
   - 01 acre it is located in BMRDA, City Corporations and district headquarters.
   - 1.5 acres if it is located in Municipalities or taluk headquarters.
   - 3 acres if it is any other rural areas.

   ಮುಂದುವರೆದು, ಸಂಘ/ಸಂಸ್ಥೆಯು ಜಮೀನಿನ ಕುರಿತು ಪಹಣಿ ಅಥವಾ ಪುರಸಭೆ / ಸಂಬಂಧಪಟ್ಟ ನಗರಪಾಲಿಕೆ/ಮಹಾನಗರ ಪಾಲಿಕೆ/ಪಟ್ಟಣ ಪಂಚಾಯಿತಿಯಿಂದ ಪಡೆದ ಇತ್ತೀಚಿನ ಖಾತಾ ನಕಲು ಅಥವಾ ಸದರಿ ಜಮೀನನ್ನು ಸಂಸ್ಥೆಯ/ ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೊಂದಾಯಿತ ಕ್ರಯ ಪತ್ರವನ್ನು ಸಲ್ಲಿಸಬೇಕು ಹಾಗೂ 30 ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಯ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಾಯಿತ ಲೀಜ್ ಡೀಡ್ ಅಥವಾ ದಾನಪತ್ರದ ದೃಢೀಕೃತ ನಕಲು ಪ್ರತಿಗಳನ್ನು ಹಾಜರಪಡಿಸತಕ್ಕದ್ದು.

3. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 218 ಯುಎನ್ಇ 2020. ದಿನಾಂಕ: 28-08-2020 ರಲ್ಲಿ ನಿರ್ದೇಶಿಸಿರುವಂತೆ ಅಗ್ನಿಶಾಮಕ ಇಲಾಖೆಯಿಂದ ಪಡೆದ **ಅಗ್ನಿ ಸುರಕ್ಷತಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರುವುದು.**
4. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 218 ಯುಎನ್ಇ 2020. ದಿನಾಂಕ: 28-08-2020 ರಲ್ಲಿ ನಿರ್ದೇಶಿಸಿರುವಂತೆ ಪಡೆದ **ಲೋಕೋಪಯೋಗಿ ಇಲಾಖೆಯಿಂದ ಪಡೆದ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರುವುದು.**
5. ಹೊಸ ಬಿ.ಬಿ.ಎ, ಬಿ.ಸಿ.ಎ, ಬಿ.ಎಚ್.ಎಂ, ಎಂ.ಬಿ.ಎ ಹಾಗೂ ಎಂ.ಸಿ.ಎ ಕೋರ್ಸುಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಸದರಿ ಮಹಾವಿದ್ಯಾಲಯವು AICTEಯಿಂದ ಕಡ್ಡಾಯವಾಗಿ ಮಾನ್ಯತೆ ಪಡೆಯುವುದು ಹಾಗೂ ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸಿದ ಅರ್ಜಿಯ ಪ್ರತಿ ಅಥವಾ **LoA**ಯ ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಅದಾದನಂತರವೇ ಸರ್ಕಾರಕ್ಕೆ ತಮ್ಮ ಅರ್ಜಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗುವುದು.
6. ಹೊಸ ಬಿ.ಇಡಿ/ಬಿ.ಪಿ.ಇಡಿ/ಎಮ್.ಇಡಿ/ಎಮ್.ಪಿ.ಇಡಿ/ಐ.ಟಿ.ಇ.ಪಿ ಕೋರ್ಸುಗಳಿಗೆ ಸಂಯೋಜನಾ ಅರ್ಜಿ ಸಲ್ಲಿಸುವವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59(13)ರ ಪ್ರಕಾರ NCTE ಯಿಂದ ಮಾನ್ಯತೆ ಪಡೆದ ನಂತರವೇ ಕೋರ್ಸ ಪ್ರಾರಂಭಿಸಲು ಅರ್ಜಿ ಸಲ್ಲಿಸತಕ್ಕದ್ದು.
7. ಹೊಸ ಮಹಾವಿದ್ಯಾಲಯ / ಹೊಸ ಕೋರ್ಸ್ಗೆ ಮಹಾವಿದ್ಯಾಲಯವು ಸರ್ಕಾರದಿಂದ ಅನುಮೋದನೆ ಪಡೆದ ನಂತರ 2027-28ನೇ ಶೈಕ್ಷಣಿಕ ಸಾಲಿಗೆ ನಿಗದಿ ಪಡಿಸಿದ ಶುಲ್ಕದ ಪಟ್ಟಿಯಲ್ಲಿರುವಂತೆ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

II. ಪ್ರಸ್ತುತ ಚಾಲ್ತಿಯಲ್ಲಿರುವ ಮಹಾವಿದ್ಯಾಲಯಗಳ ಸಂಯೋಜನೆ ಅರ್ಜಿಯ ಕುರಿತು.

1. ಪ್ರಸ್ತುತ ಚಾಲ್ತಿಯಲ್ಲಿರುವ ಮಹಾವಿದ್ಯಾಲಯಗಳು UUCMS Portal ನಲ್ಲಿ CTA (Continuation of Temporary Affiliation) ಯನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ ಮುಂದುವರಿಕೆ/ವಿಸ್ತರಣೆಗಾಗಿ ಅರ್ಜಿಯನ್ನು ಸಲ್ಲಿಸಬೇಕು.
2. ಒಂದು ವೇಳೆ ಚಾಲ್ತಿಯಲ್ಲಿರುವ ಮಹಾವಿದ್ಯಾಲಯವು ಪ್ರವೇಶ ಮಿತಿ ಹೆಚ್ಚಳ/ಹೊಸ ಕೋರ್ಸು/ಹೊಸ ವಿಷಯ ಸಮೂಹ/ ಹೊಸ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ಹಾಗೂ ಇನ್ನಿತರ ಸಂಯೋಜನೆಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ UUCMS Portal ನಲ್ಲಿ Intake Increase/ New Course/New Combination /Additional Programme/Fresh Permanent Affiliation/Renewal of Permanent Affiliation ಆಯ್ಕೆ ಮಾಡಿಕೊಂಡು ಅರ್ಜಿ ಸಲ್ಲಿಸಬಹುದಾಗಿದೆ.
3. ಒಂದು ವೇಳೆ ಮಹಾವಿದ್ಯಾಲಯವು ಬಿ.ಬಿ.ಎ, ಬಿ.ಸಿ.ಎ, ಬಿ.ಎಚ್.ಎಂ, ಎಂ.ಬಿ.ಎ ಹಾಗೂ ಎಂ.ಸಿ.ಎ ಕೋರ್ಸುಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಸದರಿ ಮಹಾವಿದ್ಯಾಲಯವು **AICTE**ಯಿಂದ ಕಡ್ಡಾಯವಾಗಿ ಮಾನ್ಯತೆ ಪಡೆಯುವುದು ಹಾಗೂ ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸಿದ ಅರ್ಜಿಯ ಪ್ರತಿ ಅಥವಾ **LoA**ಯ ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ಅದಾದನಂತರವೇ ಸರ್ಕಾರಕ್ಕೆ ತಮ್ಮ ಅರ್ಜಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗುವುದು.
4. ಹೊಸ ಬಿ.ಇಡಿ/ಬಿ.ಪಿ.ಇಡಿ/ಎಮ್.ಇಡಿ/ಎಮ್.ಪಿ.ಇಡಿ/ಐ.ಟಿ.ಇ.ಪಿ ಹೊಸ ಕೋರ್ಸುಗಳಿಗೆ ಅರ್ಜಿ ಸಲ್ಲಿಸುವವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯದು 2000 ದ ಪ್ರಕರಣ 59(13) ರ ಪ್ರಕಾರ **NCTE** ಯಿಂದ ಮಾನ್ಯತೆ ಪಡೆಯುವುದು ಕಡ್ಡಾಯವಾಗಿರುತ್ತದೆ.
5. ಮುಂದುವರೆದು, ಚಾಲ್ತಿಯಲ್ಲಿರುವ ಮಹಾವಿದ್ಯಾಲಯಗಳು ಹೊಸದಾಗಿ ಸ್ನಾತಕ/ಸ್ನಾತಕೋತ್ತರ ಪದವಿಗಳನ್ನು ಆರಂಭಿಸಲು ಇಚ್ಚಿಸಿದ್ದಲ್ಲಿ ಕನಿಷ್ಠ ಮಹಾವಿದ್ಯಾಲಯವು ಪ್ರಾರಂಭವಾಗಿ ಮೂರು ಶೈಕ್ಷಣಿಕ ವರ್ಷವನ್ನು ಪೂರೈಸಿರಬೇಕು.

III. ಹೊಸದಾಗಿ ಶಾಶ್ವತ ಸಂಯೋಜನೆ ಮತ್ತು ಶಾಶ್ವತ ಸಂಯೋಜನೆ ಮುಂದುವರಿಕೆ

1. **ಹೊಸದಾಗಿ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ಅರ್ಜಿ ಕುರಿತು:**

   Fresh Permanent Affiliation (FPA) / Renewal of Permanent of Affiliation (RPA)

   ಶಾಶ್ವತ ಸಂಯೋಜನೆಯನ್ನು ಪಡೆಯಲಿಚ್ಚಿಸುವ ಮಹಾವಿದ್ಯಾಲಯಗಳು ಹಾಗೂ ಈಗಾಗಲೇ ಶಾಶ್ವತ ಸಂಯೋಜನೆಯ ಅವಧಿ ಮುಗಿದ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯದಿಂದ ನಿರಂತರವಾಗಿ ಕಳೆದ 5 (ಐದು) ವರ್ಷಗಳ ಮುಂದುವರಿಕೆ ಸಂಯೋಜನೆಯನ್ನು ಹೊಂದಿರಬೇಕು. (ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣದ (62) ಶಾಶ್ವತ ಸಂಯೋಜನೆಯ ಅರ್ಜಿಗಳನ್ನು UUCMS ತಂತ್ರಾಂಶದ ಮೂಲಕ ಈ ಕೆಳಕಂಡ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು.

   - ಜಮೀನಿಗೆ ಸಂಬಂಧಿಸಿದ ದಾಖಲಾತಿ ಪ್ರತಿ.
   - ಚಾಲ್ತಿಯಲ್ಲಿರುವ ನ್ಯಾಕ್ ಪ್ರಮಾಣ ಪತ್ರ (NAAC Certificate)
   - ಚಾಲ್ತಿಯಲ್ಲಿರುವ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ (Fire Safety Certificate)
   - ಚಾಲ್ತಿಯಲ್ಲಿರುವ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ(Building Safety Certificate)

IV. ಸ್ಥಳೀಯ ವಿಚಾರಣಾ ಸಮಿತಿ (LIC)ಯ ರಚನೆ ಮತ್ತು ಪರಿಶೀಲನೆ

- ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಉಪ ಪ್ರಕರಣ 60 ರ ಪ್ರಕಾರ ಸಂಯೋಜನೆಯ ವಿವಿಧ ತೆರೆನಾದ ಅರ್ಜಿಗಳನ್ನು ಸಲ್ಲಿಸಿದ ಮಹಾವಿದ್ಯಾಲಯದ ಪರಿಶೀಲನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸಲಾಗುತ್ತದೆ. ಸದರಿ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವರದಿಯನ್ನು UUCMS Portal ಮುಖಾಂತರ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತದೆ.

- **ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಇ 2021, ದಿನಾಂಕ:12.02.2021 ರನ್ವಯ ಸಂಯೋಜನಾ ಪ್ರಸ್ತಾವನೆಗಳನ್ನು ಕೆಳಕಂಡ ಸಂಯೋಜನಾ ಅಂಕಗಳ ಆಧಾರದ ಮೇಲೆ ನಿಗದಿಪಡಿಸಲಾಗಿದೆ.**

ಕ್ರಸಂ	ನಿಗದಿಪಡಿಸಬಹುದಾದ ಸಂಯೋಜನೆಯ ರೀತಿ	ಕನಿಷ್ಟ ಅಂಕಗಳು (%) (ರಿಯಾಯಿತಿ ನಂತರ)
1	ಹೊಸ ಸಂಯೋಜನೆಗಳು/ಮಹಾವಿದ್ಯಾಲಯಗಳು	35
2	ಸಂಯೋಜನೆಗಳ ನವೀಕರಣ/ಮುಂದುವರಿಕೆ/ವಿಸ್ತರಣೆ	40
3	ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ	45
4	ಹೊಸ ಕೋರ್ಸುಗಳ/ ಹೊಸ ವಿಷಯ ಸಮೂಹಗಳ ಮಂಜೂರಾತಿ	50
5	ಹೊಸ ಶಾಶ್ವತ ಸಂಯೋಜನೆಗಳು	55
6	ಶಾಶ್ವತ ಸಂಯೋಜನ ನವೀಕರಣ	65

V. **ಮಹಾವಿದ್ಯಾಲಯ ಸ್ಥಗಿತ**: ಒಂದು ವೇಳೆ ಸಂಸ್ಥೆಯವರು ಸ್ವಯಂ ಇಚ್ಛೆಯಿಂದ ಮಹಾವಿದ್ಯಾಲಯವನ್ನು ಸ್ಥಗಿತಗೊಳಿಸಲು ಇಚ್ಚಿಸಿ ಅರ್ಜಿ ಸಲ್ಲಿಸಿ, ಸರ್ಕಾರದಿಂದ ಅನುಮೋದನೆಗೊಂಡ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಉಪಪ್ರಕರಣ 65 ರ ಪ್ರಕಾರ ವಿಶ್ವವಿದ್ಯಾಲಯವು ಮಹಾವಿದ್ಯಾಲಯದ ಠೇವಣಿ ನಿಗದಿ ಪಡಿಸಿದ ಹಣದಲ್ಲಿ ಶೇಕಡಾ 20% ರಷ್ಟನ್ನು ಕಡಿತಗೊಳಿಸಿ ಉಳಿದ ಹಣವನ್ನು ಮಹಾವಿದ್ಯಾಲಯದ ಸ್ಥಗಿತಗೊಳಿಸುವಿಕೆ ಕುರಿತು ಅಧಿಸೂಚನೆ ಹೊರಡಿಸಿದ ನಂತರ ಮರಳಿ ನೀಡಲಾಗುವುದು.

VI. **ಸರ್ಕಾರಿ ಮಹಾವಿದ್ಯಾಲಯಗಳಿಗೆ ಶುಲ್ಕ ವಿನಾಯಿತಿ ಕುರಿತು:** ಸರ್ಕಾರಿ ಆದೇಶ ನಂ. ಇಡಿ/**228/**ಯುಎನ್‌ಇ/**2024** ದಿನಾಂಕ: **29-03-2025**ರ ಆದೇಶದನ್ವಯ, ಸಂಯೋಜಿತ ಸರ್ಕಾರಿ ಮಹಾವಿದ್ಯಾಲಯಗಳಿಂದ ಯಾವುದೇ ರೀತಿಯ ಸಂಯೋಜನಾ ಅರ್ಜಿ ಶುಲ್ಕ/ಸಂಯೋಜನಾ ವಸೂಲಾತಿ ಮಾಡದಂತೆ ನಿರ್ದೇಶಿಸಲಾಗಿದೆ. ಆದುದರಿಂದ, ಸಂಯೋಜಿತ ಸರ್ಕಾರಿ ಮಹಾವಿದ್ಯಾಲಯಗಳಿಂದ ಯಾವುದೇ ರೀತಿಯ ಸಂಯೋಜನಾ ಶುಲ್ಕ ಮತ್ತು ಅರ್ಜಿಯ ಶುಲ್ಕವನ್ನು ಆಕರಿಸುವುದಿಲ್ಲ (ಕಡ್ಡಾಯ ಶುಲ್ಕ ಹೊರತುಪಡಿಸಿ) ಎಂದು ಈ ಮೂಲಕ ಸೂಚಿಸಲಾಗಿದೆ.

VII. **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಸ್ಥೆ/ಮಹಾವಿದ್ಯಾಲಯಗಳಿಗೆ ಸಂಯೋಜನಾ ಶುಲ್ಕದ ಮೊತ್ತದಲ್ಲಿ 50% ರಿಯಾಯಿತಿ:** ಸರಕಾರದ ಆಧೇಶ ಸಂಖ್ಯೆ: ಇಡಿ 237 ಟಿಪಿಯು 2005, ಬೆಂಗಳೂರು, ದಿನಾಂಕ: 29.01.2007 ರ ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಸ್ಥೆ/ಮಹಾವಿದ್ಯಾಲಯಗಳಿಗೆ ಸಂಯೋಜನಾ ಶುಲ್ಕದ ಮೊತ್ತದಲ್ಲಿ ಶೇಕಡಾ 50 ರಷ್ಟು ರಿಯಾಯಿತಿಯನ್ನು ಸೌಲಭ್ಯವನ್ನು ನೀಡಲಾಗಿದೆ.(ಕೇವಲ ಸಂಯೋಜನಾ ಶುಲ್ಕಗಳಿಗೆ ಮಾತ್ರ)

VIII. **ಶಿಕ್ಷಣ/ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳು ನಿಯಮಗಳನ್ನು ಉಲ್ಲಂಘಿಸದಿರುವ ಕುರಿತು**: ಶಿಕ್ಷಣ/ದೈಹಿಕ ಶಿಕ್ಷಣ ಮಹಾವಿದ್ಯಾಲಯಗಳಿಗೆ**,** ಒಂದು ವೇಳೆ **NCTE New Delhi** ಯಿಂದ ಮಾನ್ಯತೆ ಹಿಂತೆಗೆದುಕೊಂಡಲ್ಲಿ ಸದರಿ ಮಹಾವಿದ್ಯಾಲಯಗಳು ಯಾವುದೇ ಶೈಕ್ಷಣಿಕ ಮುಂತಾದ ಚಟುವಟಿಕೆಗಳನ್ನು ಮಾಡುವಂತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

IX. **ಮುಚ್ಚಳಿಕೆ ಪ್ರಮಾಣ ಪತ್ರ ನೀಡುವುದು:**

ರೂ. 500 ಮುಖ ಬೆಲೆಯ ಛಾಪಾ ಕಾಗದದ ಮೇಲೆ (Bond Paper) ಮುಚ್ಚಳಿಕೆ ಪ್ರಮಾಣ ಪತ್ರ ನೀಡುವುದು.

ಪಕ್ಷಗಾರರು:

ಮೊದಲನೇಯ ಪಕ್ಷಗಾರರು : ಸಂಸ್ಥೆ/ಮಹಾವಿದ್ಯಾಲಯದ ಅಧ್ಯಕ್ಷರು/ಕಾರ್ಯದರ್ಶಿಗಳು/ಪ್ರಾಚಾರ್ಯರು

ಎರಡನೇಯ ಪಕ್ಷಗಾರರು : ಕುಲಸಚಿವರು, ಕಿರಾಚವಿ, ಬೆಳಗಾವಿ.

X. ಎಲ್ಲ ಮಹಾವಿದ್ಯಾಲಯಗಳು ಕಡ್ಡಾಯವಾಗಿ ಭರಿಸಬೇಕಾದ ಶುಲ್ಕದ ವಿವರ : (ಸರ್ಕಾರಿ ಮಹಾವಿದ್ಯಾಲಯಗಳು/ಶಾಶ್ವತ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯಗಳೂ ಸೇರಿದಂತೆ)

. ಸಂ	**ಶುಲ್ಕದ ವಿವರ**	**ಶುಲ್ಕದ ಮೊತ್ತ (ರೂ.)**
1	ಕ್ರೀಡಾ ಶುಲ್ಕ	2,500
2	ಕನ್ನಡ ಸಂಘ	750
3	ವಿಶ್ವವಿದ್ಯಾಲಯದ ಅಭಿವೃದ್ಧಿ ಶುಲ್ಕ	5,500
	ಒಟ್ಟು ಮೊತ್ತ	**8,750**

ವಿಶೇಷ ಸೂಚನೆಗಳು:

1. **ಯು.ಜಿ.ಸಿ/ಕರ್ನಾಟಕ ಸರ್ಕಾರ/ವಿಶ್ವವಿದ್ಯಾಲಯದ ನಿಯಮಾವಳಿಗಳ** ಪ್ರಕಾರ ಕಾಲಕಾಲಕ್ಕೆ ಶುಲ್ಕದಲ್ಲಿ ಬದಲಾವಣೆಯಾಗಬಹುದು**.**
2. **ಸಂಯೋಜನಾ** ಶುಲ್ಕ / ಸಂಯೋಜನೆಗೆ ಸಂಬಂಧಪಟ್ಟ ಇತರೆ ಶುಲ್ಕಗಳ ಹಾಗೂ ಇನ್ನಿತರ ಸಂಯೋಜನೆಯ ಬಗ್ಗೆ **www.rcub.ac.in** ವೆಬ್‌ಸೈಟ್ ಮೂಲಕ ಮಾಹಿತಿ ಪಡೆದುಕೊಳ್ಳಬಹುದಾಗಿದೆ**.** ವೆಬ್ ಸೈಟ್‌ನಲ್ಲಿ ನೀಡಿದ ಅಧಿಸೂಚನೆಯ ಎಲ್ಲ ಮಾಹಿತಿಯು ಷರತ್ತು**/**ತಿದ್ದುಪಡಿಗೊಳಪಟ್ಟಿರುತ್ತದೆ**.**
3. ಎಲ್ಲ ಶುಲ್ಕಗಳನ್ನು ವಿಶ್ವವಿದ್ಯಾಲಯದ **ಆನ್‌ಲೈನ್ Billdesk** ಮುಖಾಂತರ ಕಡ್ಡಾಯವಾಗಿ ಪಾವತಿಸುವುದು.
4. ಸಲ್ಲಿಸಿದ ಅರ್ಜಿಗಳನ್ನು ದ್ವಿ-ಪ್ರತಿಯಲ್ಲಿ ಮುದ್ರಿಸಿ ನಿಗದಿತ ಅವಧಿಯೊಳಗೆ ಸಲ್ಲಿಸುವುದು.

Sd/-

ಸಂತೋಷ ಕಾಮಗೌಡ ಕೆ.ಎ.ಎಸ್

ಕುಲಸಚಿವರು